**ಓ.ಎಸ್ ನಂ. 93/2020** **ಪಿ.ಡಬ್ಲ್ಯೂ-1**

**<u>ಸಾಕ್ಷಿಯನ್ನು ದಿನಾಂಕ 13.10.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>

ದಿನಾಂಕಃ 20.06.2016 ರ ಕರ್ನಾಟಕ ಸರ್ಕಾರದ ಸುತ್ತೋಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 10 ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ** 1 ರಿಂದ 3 ನೇ ಪ್ರತಿವಾದಿ ಶ್ರೀಮತಿ ಕೆ.ಎಮ್.ಎನ್ ಪರ ವಕೀಲರಿಂದಃ</u>

ನಾನು ಖಾಸಗಿಯಾಗಿ ಅರ್ಜಿ ನೀಡಿ ಆಸ್ತಿಯ ಪೋಡಿ ಮಾಡಲು ಸರ್ಕಾರವು ಅವಕಾಶ ನೀಡಿರುವ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ಯಾವ ಕಾರಣಕ್ಕೆ ಅದನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಅಪಘಾತ ರೀತಿ ಪೋಡಿ ಮಾಡಲು ಸರ್ಕಾರವು ಅವಕಾಶ ನೀಡಿರುತ್ತದೆ ಎಂದು ಗೊತ್ತಾದ ನಂತರ ಸದರಿ ದಾಖಲಾತಿಯನ್ನು ಪಡೆದು ಕೊಂಡಿರುತ್ತೇನೆ ಮತ್ತು ಆ ಬಗ್ಗೆ ವಾದ ಪತ್ರದಲ್ಲಿ ನಮೂದಿಸಿರುತ್ತೇನೆ ಎನ್ನುವರು. ಆ ರೀತಿ ಏಕಪಕ್ಷೀಯವಾಗಿ ಪೋಡಿ ಮಾಡಿ ಕೊಡಲು ಸ್ವಾಮಿ ಎಂಬುವವರನ್ನು ನಾನು ಕೇಳಿರುತ್ತೇನೆ ಅವರು ಈಗ ತೀರಿಕೊಂಡಿರುತ್ತಾರೆ. ನಾನು ಸದರಿ ಸ್ವಾಮಿ ಎಂಬುವವರಿಗೆ ಲಿಖಿತವಾಗಿ ನೋಟಿಸು ನೀಡಿ ಕೇಳಿರುವುದಿಲ್ಲ. ಕರಾರು ಪತ್ರವನ್ನು 2014 ರಲ್ಲಿ ಮಾಡಿ ಕೊಂಡಿರುತ್ತೇನೆ. ಸದರಿ ನಿಪಿ 10 ರ ಸುತ್ತೋಲೆಯು 2016 ರಲ್ಲಿ ಬಂದಿದ್ದು, ಆದರೆ ನನಗೆ 2018 ರಲ್ಲಿ ಗೊತ್ತಗಿರುತ್ತದೆ. ಸದರಿ ನಿಪಿ 10 ನ್ನು ನಾನು ಇತ್ತೀಚೆಗೆ ಪಡೆದಿರುತ್ತೇನೆ. ಸದರಿ ಸುತ್ತೋಲೆಯನ್ನು ಕೇಸು ದಾಖಲಿಸುವಾಗ ಹಾಜರು ಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಈ ಪಿ 10 ಸುತ್ತೋಲೆಯಲ್ಲಿರುವ ವಿಷಯಕ್ಕೆ ಮತ್ತು ದಾವಾ ಆಸ್ತಿಯ ಕರಾರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೌಖಿಕವಾಗಿ ಮೇಲೆ ಕೇಳಿದಂತ ಸ್ವಾ ಮಿಯವರು ಈಗ ತೀರಿಕೊಂಡಿದ್ದು, ಆ ಕಾರಣ ಸಂಬಂಧ ಇರದೇ ಇರುವ ನಿಪಿ 10 ನ್ನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.